| 1 | 2 | 3 | | 4 | 5 | 6 | 7 | 8 | 9 | 10 |
|---|---|---|---|---|---|---|---|---|---|---|
| 12. | ಅಧೀಕ್ಷರು | 24 | 3 | 0 | 3 | 2 | 1 | 2 | | 35 |
| 13. | ಪ್ರಥಮ ದರ್ಜೆ ಸಹಾಯಕರು | 28 | 4 | 3 | 5 | 1 | 2 | 3 | | 46 |
| 14. | ಶೀಘ್ರಲಿಪಿಗಾರರು | 6 | 1 | 1 | 2 | 0 | 0 | 1 | | 11 |
| 15. | ದ್ವಿತೀಯ ದರ್ಜೆ ಸಹಾಯಕರು | 35 | 7 | 4 | 8 | 3 | 4 | 2 | | 63 |
| 16. | ಬೆರಳಚ್ಚುಗಾರರು | 16 | 3 | 0 | 1 | 1 | 1 | 1 | | 23 |
| 17. | ವಾಹನ ಚಾಲಕರು | 5 | 0 | 1 | 1 | 1 | 1 | 1 | | 10 |
| 18. | ಅಟೆಂಡರ್ | 18 | 5 | 0 | 2 | 3 | 2 | 2 | | 32 |
| 19. | ಪರಿಚಾರಕರು | 20 | 3 | 3 | 5 | 3 | 4 | 1 | | 39 |
| | | 174 | 32 | 19 | 33 | 19 | 20 | 17 | | 314 |

**ರಾಜ್ಯದಲ್ಲಿ ಕುಡಿಯುವ ನೀರು ಸರಬರಾಜು**

26 (210) : ಶ್ರೀ ರವೀಂದ್ರನಾಥ್ ಎಸ್.ಎ (ಮಾಯಕೊಂಡ) ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನದಿ ನೀರು ಬಳಸಿಕೊಂಡು ಕೆರೆ – ಕಟ್ಟೆಗಳಿಗೆ ತುಂಬಿಸಿ ಜನ ಜಾನುವಾರುಗಳಿಗೆ ಕುಡಿಯಲು ನೀರು ಪೂರೈಸುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ;

ಆ) ಯೋಜನೆಯ ರೂಪು–ರೇಷೆಗಳೇನು; ಇದಕ್ಕೆ ತಗಲುವ ವೆಚ್ಚ, ಪ್ರಸ್ತಾವಿತ ಯೋಜನೆಯ ನೀರು ಸಂಗ್ರಹಣದ ಗುರಿ ಹಾಗೂ ನೀರು ಪೂರೈಕೆಯನ್ನು ಹೇಗೆ ನಿರ್ವಹಿಸಲಾಗುತ್ತದೆ;

ಇ) ಕುಡಿಯುವ ನೀರಿನ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಈ ಯೋಜನೆಯನ್ನು ರೂಪಿಸಲಾಗಿದ್ದರೆ, ಕುಡಿಯಲು ಯೋಗ್ಯವಾಗಿ ಪರಿವರ್ತಿಸುವ ಕೆಲಸದ ಬಗ್ಗೆ ಕಾಳಜಿ ವಹಿಸಲಾಗುವುದೇ;

ಈ) ಈಗಾಗಲೇ ಈ ಯೋಜನೆ ಕಾರ್ಯಗತಗೊಂಡಿದೆಯೇ ಯಾವ ಯಾವ ಜಿಲ್ಲೆಯಲ್ಲಿ ಜಾರಿಯಾಗಿದೆ, ಸದರಿ ಯೋಜನೆಯು ತಾತ್ಕಾಲಿಕವೇ ಅಥವಾ ಸಂಪೂರ್ಣ ಶಾಶ್ವತ ಯೋಜನೆಯೇ? (ವಿವರ ನೀಡುವುದು)

ಶ್ರೀ ಕೆ.ಬಿ. ಕೋಳಿವಾಡ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) :

ಅ) ಅವಶ್ಯಕತೆಯನುಸಾರ ಆಯಾ ಜಿಲ್ಲಾ ಪಂಚಾಯತಿಗಳು ಆರ್ಥಿಕ ಮತ್ತು ತಾಂತ್ರಿಕ ಕಾರ್ಯಸಾಧುತ್ವದನ್ವಯ ಇಂತಹ ಯೋಜನೆಗಳನ್ನು ರೂಪಿಸಲು ಅವಕಾಶವಿದೆ.

ಆ) ಈ ಯೋಜನೆಗಳ ವೆಚ್ಚ ಸ್ಥಳೀಯ ವಾಸ್ತವಿಕತೆಯನ್ನು ಆಧರಿಸಿರುತ್ತದೆ. ಕೆರೆಗಳಿಗೆ ನೀರು ತುಂಬಿಸುವುದರಿಂದ ಅಲ್ಲಿನ ಅಂತರ್ಜಲ ಅಭಿವೃದ್ಧಿಗೆ ಮತ್ತು ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಅನುಕೂಲವಾಗುತ್ತದೆ. ಪೈಪ್‌ಗಳ ಮೂಲಕ ನದಿಯ ನೀರನ್ನು ಕೆರೆ ಕಟ್ಟೆಗಳಿಗೆ ಪಂಪ್

ಮಾಡುವುದರ ಮೂಲಕ ಹಾಯಿಸಲಾಗುತ್ತದೆ. ಕಾಲುವೆಗಳ ಮುಖೇನ ನೀರು ಹಾಯಿಸಲು ಸಾಧ್ಯವಿರುವೆಡೆ ಸದರಿ ಕ್ರಮವನ್ನು ಅನುಸರಿಸಲಾಗುವುದು.

ಇ) ಈ ಯೋಜನೆಯನ್ನು ಜಲಮೂಲಗಳ ಅಂತರ್ಜಲ ಹೆಚ್ಚಿಸಲು ಹಾಗೂ ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸಲು ರೂಪಿಸಲಾಗಿದೆ.

ಈ) ಗದಗ ಜಿಲ್ಲೆಯಲ್ಲಿ ಈ ತೆರನಾದ ಕಾಮಗಾರಿಗಳನ್ನು ತಾತ್ಕಾಲಿಕ ವ್ಯವಸ್ಥೆಗಾಗಿ ಅನುಷ್ಠಾನಗೊಳಿಸಲಾಗಿದೆ. ಹಾವೇರಿ ಜಿಲ್ಲೆಯಲ್ಲೂ ಈ ರೀತಿಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುತ್ತಿದೆ.

**ಚಾಮರಾಜನಗರದ ಪದವಿಪೂರ್ವ ಕಾಲೇಜುಗಳು**

28 (527) : ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಕೇಂದ್ರ ಸ್ಥಾನದಲ್ಲಿ ಹಾಗೂ ಚಾಮರಾಜನಗರ ತಾಲ್ಲೂಕಿನಾದ್ಯಂತ ಇರುವ ಪದವಿ ಪೂರ್ವ ಕಾಲೇಜುಗಳು ಹಾಗೂ ಅವುಗಳ ಹೆಸರುಗಳನ್ನು ತಿಳಿಸುವುದು.

ಆ) ಸದರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ / ವಿದ್ಯಾರ್ಥಿ ನಿಯರುಗಳ ಸಂಖ್ಯೆ;

ಇ) ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಎಲ್ಲಾ ವಿಷಯಕ್ಕೆ ಸಂಬಂಧಿಸಿದಂತಹ ಶಿಕ್ಷಕರು/ ಉಪನ್ಯಾಸಕರುಗಳು ಇದ್ದಾರೆಯೇ; ಇಲ್ಲದಿದ್ದಲ್ಲಿ ಯಾವ ಯಾವ ಉಪನ್ಯಾಸಕರುಗಳ ಹುದ್ದೆ ಯಾವ ಯಾವ ಕಾಲೇಜುಗಳಲ್ಲಿ ಖಾಲಿ ಇವೆ.

ಈ) ಚಾಮರಾಜನಗರ ಕೇಂದ್ರಸ್ಥಾನ ಹಾಗೂ ತಾಲ್ಲೂಕಿನಾದ್ಯಂತ ಎಷ್ಟು ಪ್ರೌಢ ಶಾಲೆಗಳು ಇವೆ. ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರುಗಳ ಸಂಖ್ಯೆ ಎಷ್ಟು? (ಗ್ರಾಮವಾರು ವಿವರ ನೀಡುವುದು)

ಉ) ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳ ಸಂಖ್ಯೆಗೆ ಅನುಗುಣವಾಗಿ ಪದವಿ ಪೂರ್ವ ಕಾಲೇಜುಗಳು ಇವೆಯೇ, ಇಲ್ಲದಿದ್ದಲ್ಲಿ ಇನ್ನಷ್ಟು ಪದವಿ ಪೂರ್ವ ಕಾಲೇಜುಗಳು ಬೇಕಾಗುವುದು, ಮಂಜೂರಾತಿ ಮಾಡುವುದಿದ್ದಲ್ಲಿ ಆದ್ಯತೆಯ ಮೇರೆಗೆ ಪ್ರಥಮವಾಗಿ ಚಂದಕವಾಡಿ ಹೋಬಳಿ ಕೇಂದ್ರ ಸ್ಥಾನದಲ್ಲಿ ಪದವಿ ಪೂರ್ವ ಕಾಲೇಜು ಮಂಜೂರಾತಿ ಮಾಡಲಾಗುವುದೇ?

ಪ್ರೋ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು) :

ಅ) ಚಾಮರಾಜನಗರ ಕೇಂದ್ರಸ್ಥಾನದಲ್ಲಿರುವ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ –05

01. J.S.S ಮಹಿಳಾ ಪದವಿ ಪೂರ್ವ ಕಾಲೇಜು ಚಾಮರಾಜನಗರ (ಎನ್‌ಸಿ–22)
02. ಶ್ರೀ ರಾಮಚಂದ್ರ ಪದವಿ ಪೂರ್ವ ಕಾಲೇಜು, ಚಾಮರಾಜನಗರ (ಎನ್‌ಸಿ–132)
03. ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಾಮರಾಜನಗರ (ಎನ್‌ಸಿ–56)
04. ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಚಾಮರಾಜನಗರ (ಎನ್‌ಸಿ–92)
05. ಸೇವಾಭಾರತಿ ಪದವಿ ಪೂರ್ವ ಕಾಲೇಜು, ಚಾಮರಾಜನಗರ (ಎನ್‌ಸಿ–128)